# 6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
# ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

**ಎಸ್.ಸಿ.ನಂ.296/2018**

(ಪ್ರಾ.ಸಾ.3 / ಚಾ.ಸಾ.4)

ತಾಃ 16-08-2019 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

ಸಾಕ್ಷಿದಾರರ ಹೆಸರು : ಸುರೇಶ್

ತಂದೆಯ ಹೆಸರು : ಪಿಳ್ಳೇಗೌಡ
ವಯಸ್ಸು : 44 ವರ್ಷ
ಉದ್ಯೋಗ : ವ್ಯವಸಾಯ
ವಾಸ ಸ್ಥಳ : ದಳಸಗೆರೆ, ಹೊಸಕೋಟೆ ತಾಲ್ಲೂಕು.

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದಃ**

1ನೇ ಆರೋಪಿಯ ಪರಿಚಯ ಇರುವುದಿಲ್ಲ, ಉಳಿದ ಆರೋಪಿತರ ಪರಿಚಯ ಇರುವುದಿಲ್ಲ, ಆರೋಪಿತರ ಮೇಲೆ ಯಾವ ಪ್ರಕರಣ ದಾಖಲಾಗಿದೆ ಗೊತ್ತಿಲ್ಲ, ಮೃತ ಕವಿತಾ ಹಾಗೂ ಚಾಸಾ-1 ರವರು ಕವಿತಾ ಡಾಬಾವನ್ನು ಇಟ್ಟಿರುವುದು ಗೊತ್ತಿಲ್ಲ, ಆದರೆ ಹೆಚ್ ಕ್ರಾಸ್ ರಸ್ತೆಯಲ್ಲಿ ಕವಿತಾ ಡಾಬಾ ಇದೆ. ಸದರಿ ಡಾಬಾ ನಡೆಸುತ್ತಿದ್ದ ಚಾಸಾ-1 ಹಾಗೂ ಮೃತ ಕವಿತಾಳ ಪರಿಚಯ ಇರುವುದಿಲ್ಲ, ಮೃತ ಕವಿತಾಳಿಗೆ ಏನಾಗಿತ್ತು ಗೊತ್ತಿಲ್ಲ, ಏಕೆ ಮೃತಳಾಗಿದ್ದಳು ಗೊತ್ತಿಲ್ಲ, ಅವಳ ಕೊಲೆಯನ್ನು ಆರೋಪಿತರು ಮಾಡಿದ್ದಾರೆ ಎಂದು ಪೋಲಿಸರಿಗೆ ಹೇಳಿಲ್ಲ, ಪೋಲಿಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ, ಮೃತ ಕವಿತಾ, ಚಾಸಾ-1 ಹಾಗೂ 1ನೇ ಆರೋಪಿಯ ಮಧ್ಯ ಏನು ವೈಷಮ್ಯ ಇತ್ತು ಗೊತ್ತಿಲ್ಲ, ಪೋಲಿಸರು ನನ್ನನ್ನು ವಿಚಾರಿಸಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಸರ್ಕಾರಿ ಅಭಿಯೋಜಕರು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಸಾಕ್ಷಿಯ ಕಲಂ.161 ರ ಅಡಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರವರಿಂದಃ-**

ನಮ್ಮೂರಿನಿಂದ ಹೆಚ್ ಕ್ರಾಸ್‌ನಲ್ಲಿರುವ ಕವಿತಾ ಡಾಬಾ 4 ಕಿ.ಮೀಟರ್ ಅಂತರದಲ್ಲಿ ಇದೆ. ನಮ್ಮ ಊರಿಗೆ ಹೋಗಿ ಬರಲು ಅದೇ ಕ್ರಾಸ್‌ನಿಂದ ಬರಬೇಕಾಗುತ್ತದೆ ಎಂದರೆ ಸರಿ. ದಿನಾಂಕ 17-11-2017 ರಂದು ಸಂಜೆ ಹೆಚ್ ಕ್ರಾಸ್‌ಗೆ ಹೋಗಿ ಸಾಮಾನುಗಳನ್ನು ತೆಗೆದುಕೊಂಡು ಬರಲು ಮೋಟಾರ್ ಸೈಕಲ್‌ನಲ್ಲಿ ಕೋಲಾರ ವಿಜಯ್‌ಪುರ್ ರಸ್ತೆ ಕವಿತಾ ಫ್ಯಾಮಿಲಿ ಡಾಬಾದ ಬಳಿ ಹೋಗುತ್ತಿದ್ದಾಗ ಏನೋ ಗಲಾಟೆ ಶಬ್ದ ಕೇಳಿಸಿತು ಎಂದು ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ, ಸ್ವಲ್ಪ ಡಾಬಾದ ರಸ್ತೆಯಲ್ಲಿ ಬರುತ್ತಿರುವಾಗ ಏನೋ ಜೋರಾಗಿ ಮಾತನಾಡಿಕೊಳ್ಳುತ್ತಿದ್ದರು, ಡಾಬಾದ ಮುಂದೆ ಒಂದು ಟಾಟಾ ಏ.ಸಿ. ವಾಹನ ಇತ್ತು , ಅದಕ್ಕೆ ಡಾಬಾದ ಸಾಮಾನುಗಳನ್ನು ತುಂಬುದಿದ್ದರು ನಾನು ಡಾಬಾದ ಸಾಮಾನುಗಳನ್ನು ಮಾರಾಟ ಮಾಡಿರಬೇಕೆ ಹಣಕಾಸಿನ ವಿಚಾರದಲ್ಲಿ ಜಗಳ ಮಾಡುತ್ತಿದ್ದಾರೆ ಎಂದು ತಿಳಿದುಕೊಂಡು ಹೆಚ್ ಕ್ರಾಸ್‌ಗೆ ಬಂದು ಸಾಮಾನುಗಳನ್ನು ತೆಗೆದುಕೊಳ್ಳಲು ರಸ್ತೆ ಪಕ್ಕದಲ್ಲಿನ ಒಬ್ಬ ವ್ಯಾಪಾರಸ್ಥಳ ಬಳಿ ಸಾಮಾನು ತೆಗೆದುಕೊಳ್ಳಲು ಹೋದಾಗ ಅಲ್ಲಿ ಪರಿಚಯಸ್ಥನಾಗಿದ್ದ ವಿಜಯ್ ಕುಮಾರ್ ಸಾಮಾನುಗಳನ್ನು ತೆಗೆದುಕೊಳ್ಳುತ್ತಿದ್ದನು. ಆತನಿಗೆ ಕವಿತಾ ಡಾಬಾದ ಮುಂದೆ ಆಗುತ್ತಿದ್ದ ಗಲಾಟೆ ಬಗ್ಗೆ ತಿಳಿಸಿದೆನು. ಅದಕ್ಕೆ ಆತನು ಡಾಬಾದ ವಿಚಾರದಲ್ಲಿ 1ನೇ ಆರೋಪಿ ಹಾಗೂ ಮೃತ ಕವಿತಾ ಹಾಗೂ ಚಾಸಾ-1 ರ ಮಧ್ಯ ವೈಷಮ್ಯ ಇದ್ದು ಈ ವಿಚಾರದಲ್ಲಿ 1ನೇ ಆರೋಪಿ ಡಾಬಾ ಖಾಲಿ ಮಾಡಿಸಲು ಅವರ ಕಡೆಯವರನ್ನು ಕರೆದುಕೊಂಡು ಬಂದಿದ್ದಾನೆ ನಾನು ಅಲ್ಲಿಂದಲೇ ಬಂದಿದ್ದು ಎಂದು ತಿಳಿಸಿ ಸಾಮಾನುಗಳನ್ನು ತೆಗೆದುಕೊಂಡು ಹೋದನು ಎಂದು ಪೋಲಿಸರ ಮುಂದೆ ಈಗ ಓದಿ ಹೇಳಿದಂತೆ

ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-3 ಎಂದು ಗುರುತಿಸಲಾಯಿತು. ಆರೋಪಿತರು ಡಾಬಾದ ವಿಚಾರದಲ್ಲಿ ಗಲಾಟೆ ಮಾಡಿ, ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿ ಮೃತ ಕವಿತಾಳ ಮೇಲೆ ಹಲ್ಲೆ ಮಾಡಿ ಕೊಲೆ ಮಾಡಿದ್ದು , ರಮೇಶ್-ಚಾಸಾ-1 ರನ್ನು ಸಹ ಕೊಲೆ ಮಾಡಲು ಪ್ರಯತ್ನಿಸಿದ್ದು ಗೊತ್ತಿದ್ದರೂ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಪರಿಚಯಸ್ಥರು ಇರುವುದರಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರೊಂದಿಗೆ ಶಾಮೀಲಾಗಿ ಅವರಿಗೆ ಶಿಕ್ಷೆಯಿಂದ ತಪ್ಪಿಸಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ರಿಂದ 3 ಹಾಗೂ 5 ಮತ್ತು 6ನೇ ಆರೋಪಿ ಪರ ಶ್ರೀ. ಎಂ.ಎಸ್.ಹೆಚ್. ವಕೀಲರಿಂದಃ**

ಆರೋಪಿತರ ಪರ ವಕೀಲರು ಯಾವುದೇ ಪಾಟೀ-ಸವಾಲು ಇಲ್ಲ ಎಂದು ಹೇಳುತ್ತಾರೆ.

**ಪಾಟೀ ಸವಾಲುಃ 4ನೇ ಆರೋಪಿ ಪರ ಶ್ರೀಮತಿ.ಕೆ.ಸಿ.ಎಂ. ವಕೀಲರಿಂದಃ**

ಆರೋಪಿತರ ಪರ ವಕೀಲರು ಯಾವುದೇ ಪಾಟೀ-ಸವಾಲು ಇಲ್ಲ ಎಂದು ಹೇಳುತ್ತಾರೆ.

**ಮರುವಿಚಾರಣೆಃ** ಇಲ್ಲ

{ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.}

ಓ. ಹೇ. ಸಾ. ಸ. ಸಹಿ ಮಾಡಿದ್ದಾರೆ.

(ಮೋಹನ ಬಾಡಗಂಡಿ)
6ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.